ತಳ್ಳುತ್ತಿದ್ದಾರೆ. ದಿನಾಂಕ 9-3-1987ರಂದು ಬಳಕೆದಾರರ ವೇದಿಕೆಯವರು ಪುರಸಭಾಧ್ಯಕ್ಷರಿಗೆ ಪತ್ರ ಬರೆದು ಮೂಡಿನಡಂಬೂರಿನ ಕೆಲವು ಬಾವಿಗಳ ನೀರನ್ನು ವೈಜ್ಞಾನಿಕ ಪರೀಕ್ಷೆಗೆ ಒಳಪಡಿಸ ಬಾರದೇಕೆ ಎಂದು ಪ್ರಶ್ನಿಸಿದ್ದು, ಆ ಬಗ್ಗೆ ಪುರಸಭಾಧ್ಯಕ್ಷರು 18-3-1987ರಂದು ಉತ್ತರ ನೀಡಿ ಪುರಸಭಾ ಕಾರ್ಮಿಕರು ಆಗಾಗ್ಗೆ ಹೋಗಿ ತೋಡಿನಲ್ಲಿ ನೀರು ಸರಿಯಾಗಿ ಹರಿದು ಹೋಗುವಂತೆ ಮಾಡುತ್ತಿದ್ದಾರೆ ಎಂದು ತಿಳಿಸಿದ್ದಾರೆ. ಆದರೆ ತೋಡಿನ ನೀರಿನಿಂದ ಅಕ್ಕಪಕ್ಕದ ಬಾವಿಗಳ ನೀರು ಕೆಟ್ಟಿರುವ ಬಗ್ಗೆ ಪುರಸಭಾಧ್ಯಕ್ಷರು ತಮ್ಮ ಉತ್ತರದಲ್ಲಿ ತಿಳಿಸಿರುವುದಿಲ್ಲ. ಆದ್ದರಿಂದ ಹೋಟೆಲಿನ ಕಲುಷಿತ ನೀರು ಹಾಗೂ ಸಾರ್ವಜನಿಕ ಮೂತ್ರಿಯಿಂದ ಬರತಕ್ಕ ಮೂತ್ರ ಇವುಗಳನ್ನು ಮೂಡ ನಿಡಂಬೂರಿನ ತೋಡಿಗೆ ಹರಿಯಲು ಬಿಡುವ ಔಚಿತ್ಯವೇನು ? ಈ ಬಗ್ಗೆ ಸೂಕ್ತ ಕ್ರಮ ಕೈಕೊಂಡು ಕಲುಷಿತ ನೀರು ತೋಡಿಗೆ ಹರಿಯದಂತೆ ಮಾಡಬೇಕೆಂದು ಸಂಬಂಧಪಟ್ಟವರಿಗೆ ನಿರ್ದೇಶಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಈ ಬಗ್ಗೆ ಸ್ಥಳೀಯ ಸಂಸ್ಥೆಯವರಿಗೆ ಸೂಕ್ತ ಕ್ರಮ ತೆಗೆದು ಕೊಳ್ಳುವುದಕ್ಕೆ ಆದೇಶ ನೀಡುತ್ತೇನೆ.

೧೧ ಜಯಪ್ರಕಾಶ್ ಮಾವಿನಕುಳಿಯವರ 'ನಿರಾಕರಣ' ಪುಸ್ತಕ ಧಾರ್ಮಿಕ ಭಾವನೆಗಳನ್ನು ಕೆರಳಿಸಿರುವುದು

ಶ್ರೀ ಬಿ. ಎಂ, ಇದಿನಬ್ಬ (ಉಳ್ಳಾಲ).—ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಮುಲ್ಕಿ ವಿಜಯಾ ಕಾಲೇಜಿನ ಪ್ರಾಧ್ಯಾಪಕರಾದ ಶ್ರೀ ಜಯಪ್ರಕಾಶ ಮಾವಿನಕುಳಿಯವರು ಬರೆದು ಪ್ರಕಟಣೆ ಗೊಳಿಸಿದ "ನಿರಾಕರಣ' ಎಂಬ ನಾಟಕ ಪುಸ್ತಕವು ಇತೀಚೆಗೆ ಬಿಡುಗಡೆಯಾಗಿದೆ. ಈ ನಾಟಕ ಪುಸ್ತಕದಲ್ಲಿ ಮುಸ್ಲಿಮರ ಧಾರ್ಮಿಕ ಭಾವನೆಗಳನ್ನು ಕೆರಳಿಸುವ ಉದ್ರೇಕಿಸುವ, ಅವಹೇಳನ ಮಾಡುವ ವಿಷಯಗಳು ಅಲ್ಲಲ್ಲಿ ಬಂದಿರುವುದು ತಿಳಿದಿದೆ. ಈ ಬಗ್ಗೆ ಅನೇಕ ಮನವಿಗಳು ನನಗೆ ಬಂದಿದೆ. ಈ ಪುಸ್ತಕದಿಂದಾಗಿ ದಕ್ಷಿಣ ಕನ್ನಡದಲ್ಲಿ ಮುಸ್ಲಿಮರಿಗೆ ತುಂಬಾ ನೋವಾಗಿದೆ. ಶಾಂತಿ ಸೌಹಾರ್ದಕ್ಕೆ ತೊಂದರೆ ಒದಗುವ ಭೀತಿ ಇದೆ. ಈ ಬಗ್ಗೆ ದೂರನ್ನು ಅಧಿಕಾರಿಗಳಿಗೆ ಸಲ್ಲಿಸಲಾಗಿದೆ, ಈ ಪುಸ್ತಕದ ಲೇಖಕರ ಮತ್ತು ಪ್ರಕಾಶಕರ ಮತ್ತು ಮುದ್ರಕರ ವಿರುದ್ಧ ನ್ಯಾಯೋಚಿತ ಕ್ರಮವನ್ನು ಸರಕಾರ ತೆಗೆದುಕೊಳ್ಳಬೇಕು. ಲೇಖಕ, ಪ್ರಕಾಶಕ ಮತ್ತು ಮುದ್ರಕರನ್ನು ಬಂಧಿಸಲಾಗಿದೆಯೇ ? ಅವರ ಮೇಲೆ ದಾವೆ ಹೂಡಲಾಗಿದೆಯೇ ? ಪುಸ್ತಕಗಳನ್ನು ಮುಟ್ಟುಗೋಲು ಹಾಕಲಾಗಿದೆಯೇ ? ಈ ಕುರಿತು ಮಾನ್ಯ ಗೃಹ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಈ ಬಗ್ಗೆ ಮಾನ್ಯ ಗೃಹ ಸಚಿವರಿಂದ ವರದಿ ತರಿಸಿ ಸನ್ಮಾನ್ಯ ಸದಸ್ಯರಿಗೆ ಒದಗಿಸುತ್ತೇನೆ.

(ಮಾನ್ಯ ವಿನಯಕುಮಾರ್ ಸೊರಕೆಯವರು ಗೈರುಹಾಜರಾಗಿದ್ದಾರೆ)

೧೨ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ 26 ಮಂದಿ ಪ್ರಾಧ್ಯಾಪಕರುಗಳನ್ನು ಖಾಯಂ ಮಾಡದೇ ಇರುವುದು

ಶ್ರೀ ಬ್ಲೇಸಿಯಸ್ ಎಂ. ಡಿಸೌಜ (ಮಂಗಳೂರು).—ಮಾನ್ಯ ಅಧ್ಯಕ್ಷರೆ, ಕ್ರಮವಾಗಿ ಸಂದರ್ಶನ ನಡೆಸಿದ್ದು, ಅರ್ಹತೆಯ ಆಧಾರದ ಮೇಲೆ ತಾತ್ಕಾಲಿಕ ಪ್ರಾಧ್ಯಾಪಕರಾಗಿ ನೇಮಕವಾಗಿದ್ದು, ಹುದ್ದೆಯ ಖಾತರಿಯಿಲ್ಲದೆ ವಾರ್ಷಿಕ ಬಡ್ತಿ, ವೈದ್ಯಕೀಯ ಸೌಲಭ್ಯ ಮುಂತಾದ ಸೌಲಭ್ಯಗಳಿಲ್ಲದೆ, ಅವರ ಕಾರ್ಯದಲ್ಲಿ ಯಾವುದೇ ರೀತಿಯ ಒತ್ತಡ ಬಂದರೂ ಗಮನಿಸದೆ, ಮೇಲಧಿಕಾರಿಗಳಿಗೆ ನಿಷ್ಠೆಯಿಂದಿದ್ದು ತಾತ್ಕಾಲಿಕ ಪ್ರಾಧ್ಯಾಪಕರಾಗಿಯೇ ಸ್ವಷ್ಟ ಹುದ್ದೆಗಳಲ್ಲಿ ಕೆಲಸ ಮಾಡುತ್ತಿರುವ 26 ಮಂದಿ ಪ್ರಾಧ್ಯಾಪಕರುಗಳನ್ನು ಮಂಗಳೂರು ವಿಶ್ವವಿದ್ಯಾನಿಲಯದವರು ಹಾಗೆಯೆ ಮುಂದುವರಿಸಿದ್ದು ಅವರನ್ನು ಖಾಯಂ ಮಾಡುವಂತೆ ಕೋರಿ ಮಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಸಂಘ ವಿಶ್ವವಿದ್ಯಾನಿಲಯವನ್ನು ಕೋರಿದ್ದಾಗ್ಯೂ ಅವರ ಬೇಡಿಕೆ ಈಡೇರಿರು